# ನಲಿ-ಕಲಿ ಆಟಿಕೆ!

ಮೆದುಳಿನ ಕ್ರಿಯೆಯನ್ನು ಚುರುಕುಗೊಳಿಸುವ ಇದೊಂದು ಮರ ಮುಟ್ಟಿನ ಆಟಿಕೆ. ಈ ನಲಿ-ಕಲಿ ಆಟಿಕೆ ಬೆರಳು ಗಾತ್ರದ, ಎರಡು ಇಂಚು ಉದ್ದದ್ದ ಬೆಣೆಯಾಕಾರದ ಮರದ ತುಂಡುಗಳ ಸಲಕರಣೆ. ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ಜೋಡಿಸಿದರೆ, ಈ ತುಂಡುಗಳು ಪರಸ್ಪರ ಸೇರಿಕೊಂಡು ವೃತ್ತಾಕಾರದ ಮರದ ಗುಮ್ಮಟದ ಆಕೃತಿಯೊಂದನ್ನು ಸೃಷ್ಟಿಸುತ್ತವೆ. ನಮ್ಮ ಪುಟಾಣಿ ಮಕ್ಕಳಿಗೆ ಚೀನಾ, ಜಪಾನ್ ನಿರ್ಮಿತ ಪ್ಲಾಸ್ಟಿಕ್ ಆಟಿಕೆಗಳನ್ನು ತಂದುಕೊಟ್ಟು ಸಂಭ್ರಮಿಸುವ ನಮಗೆ, ನಮ್ಮದೇ ಪೂರ್ವಜರ ಸೃಷ್ಟಿಯಾದ ಇಂತಹ ಎಷ್ಟೋ ಬಗೆಯ ಆಟಿಕೆಗಳನ್ನು ಮರು ಸೃಷ್ಟಿಸಿ ಕೊಟ್ಟರೆ ಆಗುವ ಸಂಭ್ರಮ ಇನ್ನೂ ದೊಡ್ಡದಲ್ಲವೇ !

**-ಹೊಸ್ಮನೆ ಮುತ್ತು, ಬೆಂಗಳೂರು**





# ಮಣ್ಣಿನ ಕಡುಬಿನ ಅಟ್ಟ

ಲೋಹದ ಪಾತ್ರೆಗಳು ಶ್ರೀಸಾಮಾನ್ಯ ಜನರ ಕೈಗೆ ಎಟಕದಿದ್ದ ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿ ನಮ್ಮ ಹಳ್ಳಿಗಳಲ್ಲಿನ ಕುಂಬಾರಣ್ಣರು ಮಣ್ಣಿನಿಂದಲೇ ತಯಾರಿಸಿಕೊಡುತ್ತಿದ್ದ ಕಡುಬಿನ ಅಟ್ಟದ ಚಿತ್ರವಿದು. ಹಬೆಯು ಹಾರಿ ಹೋಗದಂತೆ ಈ ಅಟ್ಟದ ಹೊರಮೈ ಹಾಗೂ ಒಳಮೈಗಳನ್ನು ತುಂಬಾ ಜಾಗರೂಕತೆಯಿಂದ ನಯಗೊಳಿಸಿದ ಅಂದಿನ ಕುಂಬಾರರ ತಾಳ್ಮೆಯನ್ನು ಮತ್ತು ಕೌಶಲವನ್ನು ಇಲ್ಲಿ ಗಮನಿಸಬಹುದು.

**-ರಕ್ಷಿತಾ ಆರ್.ಬಿ., ಉಡುಪಿ**

# ಅನಾಥ ಬ್ರಹ್ಮ!

ಬ್ರಹ್ಮದೇವನಿಗೆ ಆಲಯ ವಿರಳ. ಪುರಾಣ ಕತೆಯೊಂದರ ಪ್ರಕಾರ ಶಿವನ ಶಾಪಕ್ಕೆ ತುತ್ತಾದ ಬ್ರಹ್ಮನಿಗೆ ಪೂಜೆಯೂ ಇಲ್ಲ. ಪಾಪ ಇದರ ಪರಿಣಾಮವೋ ಎಂಬಂತೆ ಬ್ರಹ್ಮನ ಸುಂದರ ಕೆತ್ತನೆಯ ಶಿಲಾವಿಗ್ರಹವೊಂದು ಇಟಗಿಯ ಮಹಾದೇವ ದೇವಸ್ಥಾನದ ಆವರಣದಲ್ಲಿದೆ. ಹಸಿರು ಹುಲ್ಲು ಹಾಸಿನ ಮೇಲೆ ಅನಾಥವಾಗಿ ಕಾಣುವ ಈ ಶಿಲಾಕೃತಿ ಆಕ್ರಮಣಕಾರರ ದಾಳಿಗೂ ಒಳಗಾಗಿ ವಿರೂಪಗೊಂಡಿದೆ. ಆದರೂ ಎದುರಿನ ಮುಖದಲ್ಲಿ ಕಾಣುವ ನೀಳವಾದ ಗಡ್ಡ, ಅಕ್ಕಪಕ್ಕದ ಮುಖಗಳಿಂದ ಇದು ಬ್ರಹ್ಮನ ವಿಗ್ರಹವೆಂದು ನಿಸ್ಸಂಶಯವಾಗಿ ಹೇಳಬಹುದು. ಸೂಕ್ಷ್ಮ ಕುಸುರಿಕೆತ್ತನೆಯ ಪ್ರಭಾವಳಿ ಇರುವ ಆಕರ್ಷಕ ಮೂರ್ತಿಗೆ ಈ ದುರವಸ್ಥೆ!

**-ಧರ್ಮಾನಂದ ಶಿರ್ವ, ಬೆಂಗಳೂರು**

